3. ಶಾಸನ ರಚನೆ

I. ವಿಧೇಯಕವನ್ನು ಹಿಂದಕ್ಕೆ ಪಡೆಯುವುದು

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2015

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, 2015ನೇ ಸಾಲಿನ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನೆಗಾಗಿ ತೆಗೆದುಕೊಳ್ಳದೆ ಹಿಂದಕ್ಕೆ ಪಡೆಯಲು ಅನುಮತಿಯನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವನೆ ಹೀಗಿದೆ:

2015ನೇ ಸಾಲಿನ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚನೆಗಾಗಿ ತೆಗೆದುಕೊಳ್ಳದೆ ಹಿಂದಕ್ಕೆ ಪಡೆಯಲು ಅನುಮತಿಯನ್ನು ನೀಡುವುದು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲಾ" ಎಂದು ಸೂಚಿಸಬೇಕು.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ.

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ ಈಗ ವಿಧೇಯಕವನ್ನು ಹಿಂದಕ್ಕೆ ಪಡೆಯಲಾಗಿದೆ.

(ವಿಧೇಯಕವನ್ನು ಹಿಂದಕ್ಕೆ ಪಡೆಯಲಾಯಿತು)

ಅಧ್ಯಕ್ಷರು: ಈಗ ವಿಧೇಯಕವನ್ನು ಮಂಡಿಸುವುದು. ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2015.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಾನ್ಯ ಅಧ್ಯಕ್ಷರೆ, ಈಗ ಇಲ್ಲಿ ಮಾನ್ಯ ಸಂಸದೀಯ ಸಚಿವರು ಇಲ್ಲ. ಮಾನ್ಯ ಮುಖ್ಯಮಂತ್ರಿಗಳೂ ಸಹ ಸದನದಲ್ಲಿಲ್ಲ. ಈ ವಿಧೇಯಕವನ್ನು ಅವರೇ ಮಂಡಿಸಬೇಕಾಗಿತ್ತು. ಈಗ ಅವರುಗಳು ಯಾರೂ ಇಲ್ಲದೆ ವಿಧೇಯಕವನ್ನು ಮಂಡಿಸುವುದು ಸರಿಯಿಲ್ಲ.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ತಾಳಿ, ಶೂನ್ಯ ವೇಳೆ ಆಮೇಲೆ ತೆಗೆದುಕೊಳ್ಳೋಣ. ಈಗ ಬೇಡಿಕೆಗಳ ಮೇಲೆ ಕೆಲವರು ಮಾತನಾಡುವವರು ಇದ್ದಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ವಿಧೇಯಕ ಮಂಡನೆ ಮಾಡಬೇಕೆಂದರೆ, ಈಗ ಸದನದಲ್ಲಿ Law minister ಇಲ್ಲ, ಮುಖ್ಯಮಂತ್ರಿಗಳೂ ಇಲ್ಲ. ಅದು ಲೋಕಾಯುಕ್ತದ ಮಹತ್ವದ ಬಿಲ್ ಅದನ್ನು ಯಾರು ಬೇಕಾದರೂ ಮಂಡಣೆ ಮಾಡಿಬಿಡುವುದು ಸರಿಯಲ್ಲ. Law minister ಬರಲಿಲ್ಲ. ಮುಖ್ಯಮಂತ್ರಿಗಳೂ ಬರಲಿಲ್ಲ.

ಅಧ್ಯಕ್ಷರು: ಈಗ ವಿನಯಕುಮಾರ್ ಸೊರಕೆಯವರ ವಿಧೇಯಕ ಮಂಡನೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್: ಅದನ್ನು ಮಂಡನೆ ಮಾಡಿ. Law minister ಬರಲಿ. ಲೋಕಾಯುಕ್ತ ವಿಧೇಯಕವನ್ನು ಮಂಡನೆ ಮಾಡುವುದಕ್ಕೆ ಮೊದಲು ಅದರ ಬಗ್ಗೆ ನಾವು ಕೆಲವೊಂದು ವಿಚಾರಗಳನ್ನು ಹೇಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಮಂಡಿಸುವುದಕ್ಕಿಂತ ಮುಂಚಿತವಾಗಿ ಹೇಳಬೇಕಾಗಿದೆ ಅಧ್ಯಕ್ಷರೆ.

ಅಧ್ಯಕ್ಷರು: ಈಗ ವಿಧೇಯಕ ಮಂಡಿಸಲಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಈಗ ಮಂಡನೆ ಮಾಡಬೇಕಾದರೆ Law minister ಮತ್ತು ಮುಖ್ಯಮಂತ್ರಿಗಳಿಗೆ ನಾವು ಕೆಲವೊಂದು ವಿಚಾರಗಳನ್ನು ಹೇಳಬೇಕಾಗುತ್ತದೆ. ಬಹಳ ಮಹತ್ವದ ವಿಧೇಯಕವಿದು, ಇದನ್ನು last minuteನಲ್ಲಿ ತರುತ್ತಾರೆ. ಒಂದು ವಾರದ ಮುಂಚಿತವಾಗಿ ತೆಗೆದುಕೊಂಡು ಬನ್ನಿ ಎಂದು ನಾನು ಪ್ರತಿ BAC meetingನಲ್ಲಿ ಹೇಳುತ್ತಿದ್ದೇನೆ. ಈ ಲೋಕಾಯುಕ್ತ ಬಿಲ್ amendment ಮಾಡುವ ಬಗ್ಗೆ ಬೆಳಗಾವಿ ಅಧಿವೇಶನದಲ್ಲಿ ನಾನು ಹೇಳಿದ್ದೆನು. ವಿಶೇಷವಾಗಿ ತಿದ್ದುಪಡಿ ತರುವುದಾದರೆ ಒಂದು ವಾರದ ಮುಂಚಿತವಾಗಿ ತೆಗೆದುಕೊಂಡು ಬನ್ನಿ ಎಂದು ಹೇಳಿದ್ದೇನೆ. ಇವತ್ತು last day, ನಾಳೆ ಒಂದು ದಿವಸ session ಇದೆ. ಇವತ್ತು ಮಂಡನೆ ಮಾಡಿ, ಇವತ್ತೇ discussion ಮಾಡುವ ಈ ಪದ್ಧತಿ ಸರಿಯಲ್ಲ.

ಶ್ರೀ ವೈ.ಎಸ್.ವಿ. ದತ್ತಾ: ಮಂಡನೆ ಮಾಡುವುದಕ್ಕೆ ನಮ್ಮ ವಿರೋಧ ಇದೆ.

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು): ಮಾನ್ಯ ಸಭಾಧ್ಯಕ್ಷರೆ, ಇನ್ನೂ ಅದು ಮಂಡನೆಯಾಗಿಲ್ಲ. ಹಳೆಯ ತಿದ್ದುಪಡಿಯ ವಿಧೇಯಕವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ.

(ಗೊಂದಲ)

ಅಧ್ಯಕ್ಷರು: ನಾಯಕರೆ, ಈಗ ಶಾಸನ ರಚನೆಯಲ್ಲಿ ವಿಧೇಯಕವನ್ನು ಅಂಗೀಕರಿಸುವುದು next ಇದೆ.

ಶ್ರೀ ಜಗದೀಶ್ ಶೆಟ್ಟರ್: ಇದೆ ಅಧ್ಯಕ್ಷರೆ, ಆದರೆ ಈಗ ಈ ಬಿಲ್ ಮಂಡನೆ ಮಾಡುವುದಕ್ಕೆ ನಮ್ಮ ವಿರೋಧ ಇದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಇನ್ನೂ ಮಂಡನೆ ಸಹ ಮಾಡಿಲ್ಲ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಇಷ್ಟು ದಿವಸ ಮಂಡನೆ ಮಾಡಿ, ಮಂಡನೆ ಮಾಡಿ ಎಂದು ಹೇಳುತ್ತಿದ್ದರು. ಈಗ ಮಂಡನೆ ಮಾಡುವುದು ಬೇಡ ಎಂದರೆ ನಾವು ಏನು ತಿಳಿದುಕೊಳ್ಳಬೇಕು?

ಶ್ರೀ ದಿನೇಶ್ ಗುಂಡೂರಾವ್: ಕಾನೂನು ಸಚಿವರೇ ಬಂದು ಮಂಡನೆ ಮಾಡುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಇವತ್ತು ಮಂಡನೆ ಮಾಡುವುದೇ ಸರಿಯಿಲ್ಲ. ಲೋಕಾಯುಕ್ತದಲ್ಲಿ ನಡೆದ corruption issue ಬಗ್ಗೆ ತಿದ್ದುಪಡಿ ತೆಗೆದುಕೊಂಡು ಬನ್ನಿ ಎಂದರೆ ಇವರು ಲೋಕಾಯುಕ್ತ ಸಂಸ್ಥೆಯನ್ನೇ ದುರ್ಬಲಗೊಳಿಸುವಂಥ ಲೋಕಾಯುಕ್ತ ಬಿಲ್ ಅನ್ನು ತರುತ್ತಿದ್ದಾರೆ. ಇಡೀ ಒಂದು ಸಂಸ್ಥೆಯನ್ನು ದುರ್ಬಲಗೊಳಿಸುವಂಥದ್ದು, weak ಮಾಡುವಂಥದ್ದು ಇದರಲ್ಲಿದೆ. ಇವರಿಗೆ ಏನೋ ಮಾಡಿ ಎಂದರೆ ಅದನ್ನು ದುರುಪಯೋಗಪಡಿಸಿಕೊಂಡು ಲೋಕಾಯುಕ್ತ ಸಂಸ್ಥೆಯನ್ನು ಪೂರ್ತಿ ಹಾಳುಗೆಡವುವ ಕೆಲಸ ಮಾಡುತ್ತಿದ್ದಾರೆ. ಈ ಲೋಕಾಯುಕ್ತ ಸಂಸ್ಥೆಯನ್ನೇ ವಿಸರ್ಜನೆ ಮಾಡಿಬಿಡಿ ಹೋಗಲಿ. ಆ ಲೋಕಾಯುಕ್ತ ಬಿಲ್ಲನ್ನೇ ವಿಸರ್ಜನೆ ಮಾಡಿಬಿಡಿ, ಬೇಡವೇ ಬೇಡ. ಸರ್ಕಾರಕ್ಕೆ ಗಂಭೀರತೆ ಇಲ್ಲ. ಮೊದಲಿಗೆ ಆ ಬಿಲ್ ಮಂಡನೆಗೆ ನಮ್ಮ ವಿರೋಧ ಇದೆ. ಅವರಿಗೆ seriousness ಇಲ್ಲ. ಅಧ್ಯಕ್ಷರೆ, ಅವರಿಗೆ ಆಸಕ್ತಿ ಇಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಇನ್ನೂ ಕೂಡ ಆ ಬಿಲ್ ಮಂಡನೆ ಆಗಿಲ್ಲ, ಇವರೇಕೆ ಚರ್ಚೆ ಮಾಡುತ್ತಿದ್ದಾರೆ? ಮಾನ್ಯ ವಿರೋಧ ಪಕ್ಷದ ನಾಯಕರೆ, ಹಳೆ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಅವರು ಬಂದು ಮಂಡನೆ ಮಾಡುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕಾನೂನು ಸಚಿವರು ಇಲ್ಲ, ಎಲ್ಲಿ ಹೋದರು? ಲೋಕಾಯುಕ್ತ ಬಿಲ್ ಬಗ್ಗೆ ಮಂಡನೆ ಮಾಡುವಾಗ ಅವರಿಗೆ ಜವಾಬ್ದಾರಿ ಬೇಡವೇ?

(ಗೊಂದಲ)

ಅಧ್ಯಕ್ಷರು: ನಾಯಕರೆ, ಮಂಡಿಸುವ ಕೆಲಸ ಪೂರೈಸಿಬಿಡೋಣ.

ಶ್ರೀ ಜಗದೀಶ್ ಶೆಟ್ಟರ್: ಮಂಡನೆ ಮಾಡುವುದಕ್ಕೂ ನಾನು ವಿರೋಧಿಸುತ್ತೇನೆ. ಏಕೆಂದರೆ ಮಂಡನೆ ಯಾವಾಗ ಮಾಡಬೇಕು? ಏನು ಕಾರಣ? ಈಗ Law and Parliamentary minister ಬರಲಿ, ಮುಖ್ಯಮಂತ್ರಿಗಳು ಬರಲಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅವರು ಯಾರೂ ಕ್ಯಾಬಿನೆಟ್ level minister ಅಲ್ಲ. State level minister ಇದ್ದಾರೆ. ತಾವುಗಳು ಕ್ಯಾಬಿನೆಟ್ ಮಂತ್ರಿಗಳು ಅಲ್ಲ.

ಶ್ರೀ ಜಗದೀಶ್ ಶೆಟ್ಟರ್: ಆ ಲೋಕಾಯುಕ್ತ ಬಿಲ್ ಅನ್ನು ಇವತ್ತೇಕೆ ತಂದರು? ಒಂದು ವಾರದ ಹಿಂದೆ ತರಬೇಕಾಗಿತ್ತು. ನಾವು ಈಗ ಹೇಗೆ ಚರ್ಚೆ ಮಾಡುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ನೋಡಿ, ಆ ತರಹ ಏನಿಲ್ಲ. ಹೊಸ ತಿದ್ದುಪಡಿ ಇನ್ನೂ ಮಂಡನೆ ಆಗಿಲ್ಲ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಮಾನ್ಯ ಅಧ್ಯಕ್ಷರೆ, ಕ್ಯಾಬಿನೆಟ್ ಸಚಿವರೇ ವಿಧೇಯಕ ಮಂಡನೆ ಮಾಡಬೇಕೆಂದೇನೂ ಇಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕ್ಯಾಬಿನೆಟ್‌ನಲ್ಲಿ ಏನು ಚರ್ಚೆಯಾಗಿದೆ ಎಂದು state minister ಆದ ನಿಮಗೇನು ಗೊತ್ತಿದೆ? ಕ್ಯಾಬಿನೆಟ್ rank ನವರು ಈ ಬಿಲ್ ಅನ್ನು ಮಂಡಿಸುವುದಿಲ್ಲವೆಂದರೆ ಇದರ ಬಗ್ಗೆ Government ಗೆ

ಎಷ್ಟು seriousness ಇದೆ? ಒಂದು ಕ್ಯಾಬಿನೆಟ್ ಮಿನಿಸ್ಟರ್ ಆದರೂ ಮಂಡಿಸಬೇಕಲ್ಲವೇ?

ಶ್ರೀ ವೈ.ಎಸ್.ವಿ. ದತ್ತಾ: ಅಧ್ಯಕ್ಷರೆ, ಮಂಡನೆಗೆ ಅವಕಾಶ ಇಲ್ಲ, ಬೇಕಾದರೆ ಅವರು ಬರಲಿ.

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್: ಈಗ ಅತೀ ಶೀಘ್ರದಲ್ಲಿ ಲೋಕಾಯುಕ್ತ ಬಿಲ್ ತನ್ನಿ, ತನ್ನಿ ಎಂದು ಹೇಳಿ, ತಂದ ಮೇಲೆ ಬೇಡ, ಬೇಡ ಎಂದರೆ ನಿಮ್ಮ ಉದ್ದೇಶ ಏನು? ಎಂದು ಜನರಿಗೆ ಅರ್ಥವಾಗುತ್ತದೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ: ನಾವು ಈ ಬಿಲ್ ಅನ್ನು ತರಲಿಕ್ಕೆ ಹೇಳಲಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಲೋಕಾಯುಕ್ತ ಬಿಲ್ ತನ್ನಿ ಎಂದರೆ ಅನಾಹುತ ಮಾಡುವುದು ಇದು. ಆ ಲೋಕಾಯುಕ್ತ ಅಧಿಕಾರಿ ತಪ್ಪಿಸಿಕೊಂಡು, weak ಮಾಡಿ ಅನಾಹುತ ಮಾಡುವಂಥದ್ದು. ಇದು ಬೇಕೇ ನಿಮಗೆ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಅಲ್ಲಿ council ನಲ್ಲಿ ತೆಗೆದು ಹಾಕಿ ಎಂದು ಹೇಳಿದವರು ನೀವೇನೇ? ಈಗ ಇಲ್ಲಿ ಏಕೆ ತಂದಿದ್ದೀರಿ ಎಂದು ಕೇಳುತ್ತಿದ್ದೀರಿ?

ಅಧ್ಯಕ್ಷರು: ಅವರು ನಿಮ್ಮ ಹಾಗೆ ಜೋರು ಇದ್ದಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಒಬ್ಬರೇ ಒಬ್ಬರು ಕ್ಯಾಬಿನೆಟ್ ಮಿನಿಸ್ಟರ್ ಇಲ್ಲ. ಮುಖ್ಯಮಂತ್ರಿಗಳು ಇಲ್ಲ, ಸಂಸದೀಯ ಸಚಿವರು ಇಲ್ಲ, ಇದನ್ನು ನಾವು ಹೇಗೆ ಒಪ್ಪುವುದು ಹೇಳಿ? ಈ ಬಿಲ್‌ನಲ್ಲಿ ಏನಿದೆ ಎಂದು ಯಾರಿಗೆ ಗೊತ್ತಿದೆ? ನಮಗೆ ಈ ಬಿಲ್ ಅನ್ನು ನಾವು ಒಳಗೆ ಬಂದ ಮೇಲೆ ಕೊಟ್ಟಿದ್ದಾರೆ.

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಇದೆಂಥದ್ದು? ಬೇಗ ಬೇಗ ತನ್ನಿ ಎಂದು ಹೇಳಿ, ತಂದ ಮೇಲೆ ಬೇಡವೆಂದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್: ನಾಳೆ ಒಂದು ದಿವಸ ಅಧಿವೇಶನ ಇದೆ.

(ಗೊಂದಲ)

ಅಧ್ಯಕ್ಷರು: ಈಗ ಮಧ್ಯಾಹ್ನ ಚರ್ಚೆಗೆ ತೆಗೆದುಕೊಳ್ಳೋಣ. ಮಧ್ಯಾಹ್ನ ಚರ್ಚೆ ಮಾಡುವುದಕ್ಕೆ ಅಜೆಂಡಾದಲ್ಲಿ ಹಾಕಿಕೊಂಡಿದೆ. ಅದನ್ನು ಈಗ ಮಂಡನೆ ಮಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಜಗದೀಶ್ ಶೆಟ್ಟರ್: ಈಗ demands ಮೇಲೆ ಚರ್ಚೆ ಪ್ರಾರಂಭ ಮಾಡಿಸಿ ಸರ್, ಅವರು ಮಧ್ಯಾಹ್ನದ ಮೇಲೆ ಮಂಡನೆ ಮಾಡಿದ ಮೇಲೆ, ಅದು ಚರ್ಚೆ ಮಾಡಲಿಕ್ಕೆ ಬರುತ್ತದೋ ಇಲ್ಲವೋ ಎಂದು ನಾವು ಹೇಳುತ್ತೇವೆ. ಇವತ್ತು ಬಿಬಿಎಂಪಿ division ಸಲುವಾಗಿ ವಿಶೇಷ ಅಧಿವೇಶನ ಕರೆಯುತ್ತಾರೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೂ ಒಂದು ವಾರ ಅಧಿವೇಶನ ಕರೆಯಲಿ. ಒಂದು ವಾರ ಬಿಟ್ಟು ಅಧಿವೇಶನ ಕರೆಯಿರಿ. ನಾವು ಎರಡು ದಿವಸ discussion ಮಾಡೋಣ. 1984ರಲ್ಲಿ ಕಾನೂನು ಏನು ಬಂದಿತ್ತು.

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ತಾಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಲೋಕಾಯುಕ್ತ ಸಂಸ್ಥೆಯನ್ನೇ ಹೇಗೆ ಬಳಸಿಕೊಂಡಿದ್ದೀರಿ ಎಂಬುದು ಜಗತ್ತಿಗೆ ಗೊತ್ತಿದೆ. ಸುಮ್ಮನೆ ಏಕೆ ಮಾತನಾಡುತ್ತೀರಿ?

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಬಿಜೆಪಿ ಪಕ್ಷದವರು ಗುಜರಾತ್‌ನಲ್ಲಿ ಲೋಕಾಯುಕ್ತವನ್ನು ಯಾವ ರೀತಿ ನಿಷ್ಕ್ರಿಯ ಮಾಡಿದರು ಎಂದು ನಮಗೆ ಗೊತ್ತಿದೆ.

(ಗೊಂದಲ)

ಅಧ್ಯಕ್ಷರು: ಮಧ್ಯಾಹ್ನ ಚರ್ಚೆ ಮಾಡುವುದಕ್ಕೋಸ್ಕರ ಅಜೆಂಡಾದಲ್ಲಿ ಹಾಕಿಕೊಂಡಿದ್ದೇವೆ. ಆ ಸಂದರ್ಭದಲ್ಲಿ ಮಂಡಿಸುವುದು, ಚರ್ಚೆ ಮಾಡುವುದು ಎಲ್ಲ ಒಟ್ಟಿಗೆ ಮಾಡಿಬಿಡೋಣ.

ಶ್ರೀ ದಿನೇಶ್ ಗುಂಡೂರಾವ್: ಆಯಿತು. ಹಾಗೆ ಮಾಡೋಣ. ಆಯಿತು, ಕಾಗೇರಿಯವರೆ ಮಧ್ಯಾಹ್ನದ ಮೇಲೆ ಮಂಡನೆ ಮಾಡುತ್ತಾರೆ, ಕುಳಿತುಕೊಳ್ಳಿ.

ಅಧ್ಯಕ್ಷರು: ಈಗ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2015 ಮಂಡಿಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೆ, ಇದೇನು ಶೂನ್ಯವೇಳೆಯೋ, ಗಮನ ಸೆಳೆಯುವ ಸೂಚನೆಯಲ್ಲ, ಬಿಲ್ ತರುವುದಕ್ಕೆ ಸಚಿವರು ಇರುವುದಿಲ್ಲ ಎಂದರೆ ನಾವು ಹೇಗೆ ಒಪ್ಪಬೇಕು?

ಅಧ್ಯಕ್ಷರು: ಏನು ಮಾಡುವುದು ಅವರಿಗೆ? ಬಾಂಬೆ, ಡೆಲ್ಲಿ, ಅಲ್ಲಿ, ಇಲ್ಲಿ ಎಲ್ಲಾ ಕಡೆ ಹೋಗಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಹಾಗಿದ್ದರೆ ಈಗ ಏಕೆ ತೆಗೆದುಕೊಳ್ಳುತ್ತಾರೆ. ನಾಳೆ ತೆಗೆದುಕೊಳ್ಳಿ. ಇಲ್ಲವೇ ನಿನ್ನೆ ತೆಗೆದುಕೊಳ್ಳಬೇಕಾಗಿತ್ತು.

ಅಧ್ಯಕ್ಷರು: ಆಯಿತು ಬಿಲ್ ಮಂಡಿಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಅಧ್ಯಕ್ಷರೆ, ಇದೂ ಸಹ ಅವರು ಮಂಡಿಸಲಿ, ಆದರೆ ಚರ್ಚೆ ಮಾಡುವಾಗ ಸಚಿವರು ಇರಬೇಕಾಗುತ್ತದೆ.

ಅಧ್ಯಕ್ಷರು: ಆಯಿತು, ಸಚಿವರೇ ಮಂಡಿಸಿ.